ಇ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಎಷ್ಟು ಹಣ ನೀಡಲಾಗುತ್ತಿದೆ?

ಈ) ಹಾಗಿಲ್ಲದಿದ್ದಲ್ಲಿ ಬೆಳೆಹಾನಿಯಿಂದ ಕಂಗಾಲಾದ ರೈತನ ಕುಟುಂಬವನ್ನು ಸರ್ಕಾರ ಯಾವ ರೀತಿ ಸಂತೈಸುತ್ತದೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಅತಿವೃಷ್ಟಿಯಿಂದ ಗುಳೇದ ಗುಡ್ಡ ಮತಕ್ಷೇತ್ರದಲ್ಲಿ ರೂ.224.54 ಲಕ್ಷಗಳ ಮೌಲ್ಯದ ಕೃಷಿ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

ಆ, ಇ ಮತ್ತು ಈ) ನಿಯಮಾವಳಿಗಳ ಪ್ರಕಾರ ರೂ.18,000 ಕ್ಕಿಂತ ವಾರ್ಷಿಕ ವರಮಾನ ಕಡಿಮೆ ಇದ್ದ ರೈತನ ಬೆಳೆ ಹಾನಿಗೆ ಪ್ರತಿ ಹೆಕ್ಟೇರ್‌ಗೆ ರೂ 500-00 ರಂತೆ ಗರಿಷ್ಠ ರೂ 2000 ಗಳ ಪರಿಹಾರ ನೀಡಲು ಅವಕಾಶವಿರುತ್ತದೆ.

ಗುಳ್ಳೇದಗುಡ್ಡ ಬಸ್ ನಿಲ್ದಾಣದ ಡಾಂಬರೀಕರಣ

2807: (3755)

ಶ್ರೀ ರಾಜಶೇಖರ್ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಬಸ್ ನಿಲ್ದಾಣದ ಆವರಣವನ್ನು ಡಾಂಬರೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಮಂಜೂರ್ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು

ಆ) ಡಾಂಬರೀಕರಣ ಕೆಲಸ ನಿರ್ವಹಿಸಲು ರೂ.4,80,000-00ಗಳ ಅಂದಾಜು ಪಟ್ಟಿ ಮಂಜೂರಾತಿಯಾಗಿದ್ದು ಸದರೀ ಕೆಲಸಕ್ಕಾಗಿ ದಿನಾಂಕ: 15-10-1998ರಂದು ಟೆಂಡರ್ ಕರೆಯಲಾಗಿದೆ.

ಗುಳೇದಗುಡ್ಡ ಕ್ಷೇತ್ರದ ದೇವಸ್ಥಾನಗಳಿಗೆ ಅನುದಾನ ಬಿಡುಗಡೆ

2809: (3756)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಳ್ಳೇದಗುಡ್ಡ ನಗರದ ದೇವಾಂಗ ಸಮಾಜ ದತ್ತಿಗೆ ಮಂಗಲ ಭವನ ನಿರ್ಮಿಸಲು ಹಾಗೂ ಮತ ಕ್ಷೇತ್ರದ ಅಮೀನಗಡ ಗ್ರಾಮ ಶ್ರೀ ಬಸವೇಶ್ವರ ಟ್ರಸ್ಟ್ ಕಮಿಟಿಗೆ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

2) ಹಾಗಿದ್ದಲ್ಲಿ ಅದನ್ನು ಯಾವಾಗ ಮಂಜೂರ್ಮಾಡುವುದು?

ಶ್ರೀ ಬಿ.ಮುನಿಯಪ್ಪಮುದ್ದಪ್ಪ (ಮುಜರಾಯಿ ಸಚಿವರು):

1) ಗುಳ್ಳೇದಗುಡ್ಡ ನಗರದ ದೇವಾಂಗ ಸಮಾಜ ದತ್ತಿಗೆ ಮಂಗಲ ಭವನ ನಿರ್ಮಿಸುವ ಬಗ್ಗೆ ಯಾವ ಪ್ರಸ್ತಾವನೆ ಇರುವುದಿಲ್ಲ. ಶ್ರೀ ಬಸವೇಶ್ವರ ದೇವಾಲಯದ ಟ್ರಸ್ಟ್ ಕಮಿಟಿ ದೇವಾಲಯದ ಕಲ್ಯಾಣ ಮಂಟಪ ಕಾಮಗಾರಿಗೆ ರೂ.98,678-00ಗಳ ಮಂಜೂರಾತಿಗೆ ಪ್ರಸ್ತಾವನೆ ಸರ್ಕಾರದ ಮುಂದಿದೆ.

2) 1998-99ನೇ ಸಾಲಿನ ಅನುದಾನದಲ್ಲಿ ಪರಿಗಣಿಸಲಾಗುವುದು.

ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಉಂಟಾಗಿರುವ ನಷ್ಟ

2811: (3821)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಭಾರಿ ಮಳೆಯಿಂದ ಒಟ್ಟಾರೆ ಆಗಿರುವ ಜೀವ ಹಾನಿ ಎಷ್ಟು?

ಆ) ಬೆಳೆ ಹಾಗೂ ಆಸ್ತಿಗೆ ಸಂಬಂಧಿಸಿದಂತೆ ಆಗಿರುವ ಒಟ್ಟು ಹಾನಿಯೆಷ್ಟು?

ಇ) ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನವೆಷ್ಟು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ರಾಜ್ಯದಲ್ಲಿ ಇತ್ತೀಚಿನ ಅತಿವೃಷ್ಟಿಯಿಂದ 310 ಮಂದಿ ಮೃತಪಟ್ಟಿರುತ್ತಾರೆ.

ಆ) ಕೃಷಿ ಬೆಳೆಯೂ ಒಳಗೊಂಡಂತೆ ಖಾಸಗಿ ಆಸ್ತಿಗಳು ಮತ್ತು ಸಾರ್ವಜನಿಕ